# ಬಾಲಕಿಯ ಮುಗ್ಧತೆ ಮಾಡಿದ ಪವಾಡ

ಒಮ್ಮೆ ಎಂಟು ವರ್ಷದ ಬಾಲಕಿಯೊಬ್ಬಳು ತನ್ನ ತಮ್ಮನ ಕುರಿತು ತಂದೆ-ತಾಯಿ ಚಿಂತಾಕ್ರಾಂತರಾಗಿ ಮಾತನಾಡುವುದನ್ನು ಕೇಳಿಸಿಕೊಂಡಳು. ಅವಳಿಗೆ ಅರ್ಥವಾದುದು ಇಷ್ಟೇ: ತನ್ನ ತಮ್ಮನಿಗೆ ಆರೋಗ್ಯ ಹದಗೆಟ್ಟಿದೆ ಹಾಗೂ ಅದನ್ನು ಸರಿಪಡಿಸಲು ತಮ್ಮಲ್ಲಿ ಸಾಕಷ್ಟು ಹಣವಿಲ್ಲ. ವೈದ್ಯರ ಶುಲ್ಕವನ್ನು ತೆರಲಾರದ ಇವರು ಈಗಿದ್ದ ಮನೆಯನ್ನು ಬದಲಾಯಿಸಿ ಸಣ್ಣದೊಂದು ಮನೆಗೆ ಹೋಗಬೇಕಾಗಿತ್ತು.

ಬಹಳ ದುಬಾರಿಯಾದ ಶಸ್ತ್ರಚಿಕಿತ್ಸೆಯಿಂದ ಮಾತ್ರ ತಮ್ಮನ ಜೀವವನ್ನು ಉಳಿಸಬಹುದಾಗಿತ್ತು. ಹಾಗೆ ಉಳಿಸಲು ಬೇಕಾಗುವ ಹಣವನ್ನು ಯಾರೂ ನೀಡುವವರಿರಲಿಲ್ಲ. ಅಳುತ್ತಿರುವ ತಾಯಿಗೆ ತಂದೆ ಸಮಜಾಯಿಷಿ ಹೇಳುತ್ತಿದ್ದ: "ಪವಾಡದಿಂದ ಮಾತ್ರ ಅವನ ಜೀವ ಉಳಿಯಬಲ್ಲುದು." ತಂದೆಯ ಮಾತನ್ನು ಕೇಳಿಸಿಕೊಂಡ ಬಾಲಕಿ ತನ್ನ ಕೋಣೆಗೆ ಓಡಿಹೋದಳು. ತನ್ನ ಹಾಸಿಗೆಯಡಿಯಿದ್ದ ತನ್ನ ಒಂದು ಸಣ್ಣ ಡಬ್ಬಿಯನ್ನು ಹೊರಗೆಳೆದು ಅದರಲ್ಲಿದ್ದ ಚಿಲ್ಲರೆ ಕಾಸನ್ನೆಲ್ಲ ಎಣಿಸಿದಳು. ಬಹಳ ಎಚ್ಚರಿಕೆಯಿಂದ ಆ ಡಬ್ಬಿಯನ್ನು ತನ್ನ ಕಂಕುಳಲ್ಲಿಟ್ಟುಕೊಂಡು ಹಿಂದಿನ ಬಾಗಿಲಿನಿಂದ ಔಷಧಿಯ ಅಂಗಡಿಗೆ ಓಡಿದಳು.

ತನ್ನ ಆ ಡಬ್ಬಿಯಿಂದ ಒಂದು ಪಾವಲಿಯನ್ನು ತೆಗೆದು ಅಂಗಡಿಯವನ ಮುಂದೆ ಹಿಡಿದಳು. "ಏನು ಬೇಕು?" ಎಂದು ಮಾಲಿಕ ಕೇಳಿದ. "ನನ್ನ ತಮ್ಮನಿಗೆ ಮೈ ಸರಿಯಿಲ್ಲ. ಬಹಳ ನೋವನ್ನನುಭವಿಸುತ್ತಿದ್ದಾನೆ. ನನಗೊಂದು ಪವಾಡ ಬೇಕು." ಮಾಲಿಕನಿಗೆ ಅರ್ಥವಾಗಲಿಲ್ಲ. "ಮತ್ತೊಮ್ಮೆ ಸರಿಯಾಗಿ ಹೇಳು" ಎಂದು ಕೇಳಿದ. ಆಗ ಅವಳು ಹೇಳಿದಳು: "ನನ್ನ ತಮ್ಮನ ಹೆಸರು ಆ್ಯಂಡ್ರ್ಯೂ. ಅವನ ತಲೆಯಲ್ಲಿ ದುರ್ಮಾಂಸವೊಂದು ಬೆಳೆಯುತ್ತಿದೆ. ಕೇವಲ ಒಂದು ಪವಾಡದಿಂದ ಮಾತ್ರ ಅವನು ಬದುಕಬಹುದು ಎಂದು ತಂದೆ ಹೇಳುತ್ತಿದ್ದಾರೆ. ಒಂದು ಪವಾಡಕ್ಕೆ ಎಷ್ಟು ಬೆಲೆಯೆಂದು ದಯವಿಟ್ಟು ಹೇಳಿ!" ಅಂಗಡಿಯವನು ಅನುಕಂಪದಿಂದ ಹೇಳಿದ: "ಮಗು, ನಾವಿಲ್ಲಿ ಪವಾಡಗಳನ್ನು ಮಾರುವುದಿಲ್ಲ. ದಯವಿಟ್ಟು ಕ್ಷಮಿಸು." ಆಗ ಆ ಬಾಲಕಿ ಮತ್ತೆ ಅಂಗಲಾಚಿದಳು, "ನೋಡಿ ನನ್ನ ಹತ್ತಿರ ಅದಕ್ಕಾಗಿ ಹಣ ಇದೆ. ಇದು ಸಾಲದಿದ್ದರೆ ಪ್ರಯತ್ನಿಸಿ ಮತ್ತೆ ಸ್ವಲ್ಪ ತರುತ್ತೇನೆ. ಎಷ್ಟಾಗುವುದೆಂದು ದಯಮಾಡಿ ಹೇಳಿ."

ಈ ಬಾಲಕಿಯು ಈ ರೀತಿ ಅಂಗಲಾಚುತ್ತಿದ್ದಾಗ ಅಂಗಡಿಯಲ್ಲಿ ಮತ್ತೊಬ್ಬ ಗಿರಾಕಿ ನಿಂತಿದ್ದ. ಒಳ್ಳೆಯ ಉಡುಪನ್ನು ಧರಿಸಿದ್ದ ಆತ ಈಕೆಯ ಮಾತುಗಳನ್ನು ಕುತೂಹಲದಿಂದ ಆಲಿಸುತ್ತಿದ್ದ. ಆತ ಕೇಳಿದ "ಎಂತಹ ಪವಾಡ ಬೇಕು, ನಿನ್ನ ತಮ್ಮನಿಗೆ?" ಬಾಲಕಿ ಕಣ್ಣು ತುಂಬಿ ಹೇಳಿದಳು: "ನನಗೆ ತಿಳಿಯದು. ಆದರೆ ಅಮ್ಮ ಹೇಳುತ್ತಾಳೆ, ಅವನು ತುಂಬ ಅನಾರೋಗ್ಯದಿಂದ ನರಳುತ್ತಿದ್ದಾನೆ. ಶಸ್ತ್ರಚಿಕಿತ್ಸೆಯಾಗಬೇಕಂತೆ. ತಂದೆಯ ಬಳಿ ಅದಕ್ಕಾಗಿ ಹಣವಿಲ್ಲ. ಅದಕ್ಕೆ ನಾನು ಕೂಡಿಟ್ಟಿದ್ದ ಹಣವನ್ನು ತಂದಿರುವೆ." "ನಿನ್ನ ಬಳಿ ಎಷ್ಟು ಹಣವಿದೆ?" ಎಂದು ಆತ ಕೇಳಿದ. "ಒಂದು ಡಾಲರ್ ಹನ್ನೊಂದು ಸೆಂಟ್. ಬೇಕೆಂದರೆ ಇನ್ನೂ ಸ್ವಲ್ಪ ಪ್ರಯತ್ನಿಸಿ ತರಬಲ್ಲೆ" ಎಂದು ಕ್ಷೀಣ ಸ್ವರದಿಂದ ಹೇಳಿದಳು. ಆಗ ಆತ ಹೇಳಿದ: "ಆಹಾ! ಏನಾಶ್ಚರ್ಯ. ಒಂದು ಪವಾಡಕ್ಕೆ ಸರಿಯಾಗುವಷ್ಟು ಹಣ ನಿನ್ನ ಬಳಿಯಿದೆ. ನೀನು ನನ್ನನ್ನು ನಿನ್ನ ಮನೆಗೆ ಕರೆದೊಯ್ಯುವೆಯಾ? ನಾನು ನಿನ್ನ ತಮ್ಮ ಹಾಗೂ ತಾಯಿತಂದೆಯರನ್ನು ನೋಡಬಯಸುವೆ. ಎಂತಹ ಪವಾಡ ಬೇಕಾಗಬಹುದು ಎಂದು ಆಗ ನನಗೆ ಗೊತ್ತಾಗುವುದು." ಆ ವ್ಯಕ್ತಿ ಬೇರೆ ಯಾರೂ ಅಲ್ಲ, ನರಮಂಡಲದ ಶಸ್ತ್ರಚಿಕಿತ್ಸೆಯಲ್ಲಿ ಪರಿಣತನಾದ ಡಾ. ಕಾರ್ಲ್‌ಟನ್ ಆರ್ಮ್‌ಸ್ಟ್ರಾಂಗ್. ಆತ ಉಚಿತವಾಗಿ ಶಸ್ತ್ರಚಿಕಿತ್ಸೆಯನ್ನು ಮಾಡಿ ಆಂಡ್ರೂವಿನ ಜೀವವನ್ನು ಉಳಿಸಿದ. ಮನೆಗೆ ಬಂದ ತಮ್ಮ ಮತ್ತೆ ತನ್ನ ಅಕ್ಕನೊಡನೆ ಆಟವಾಡಲು ಆರಂಭಿಸಿದ.

ಪವಾಡದ ಬೆಲೆ ಕೇವಲ ಇಷ್ಟೆ. ಒಂದು ಡಾಲರ್ ಹನ್ನೊಂದು ಸೆಂಟ್ ಮತ್ತು ಆ ಬಾಲಕಿಯಲ್ಲಿದ್ದಂತಹ ಶ್ರದ್ಧೆ ಹಾಗೂ ಪ್ರೀತಿಯ ಕಾಳಜಿ.

(ವಿಪ್ರೋ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಅಜೀಮ್ ಎಚ್. ಪ್ರೇಂಜಿ ಅವರು ಐ.ಐ.ಟಿ. ವಿದ್ಯಾರ್ಥಿಗಳಿಗೆ ನೀಡಿದ ಭಾಷಣದಿಂದ ಸಂಗ್ರಹ)

### ಆಶಾವಾದಿಯ ರೀತಿ

ಪ್ರಸಿದ್ಧ ವಿದ್ವಾಂಸನಾದ ಮ್ಯಾಥ್ಯೂ ಹೆನ್ರಿ ಅವರ ಸಾಧಾರಣವಾದ ಮನೆಗೆ ಒಮ್ಮೆ ಒಬ್ಬ ಕಳ್ಳ ನುಗ್ಗಿ ಅವರ ಹಣವನ್ನು ದೋಚಿದ. ತನ್ನ ಓದು ಬರಹಗಳಲ್ಲೇ ನಿರತನಾಗಿದ್ದ ಈ ಆಶಾವಾದಿ ವಿದ್ವಾಂಸ ಬೇಸರವಿಲ್ಲದೆ ತನ್ನ ದಿನಚರಿಯಲ್ಲಿ ಕೂಡಲೆ ಹೀಗೆ ಬರೆಯಲು ಪ್ರಾರಂಭಿಸಿದ: "ನಾನು ಧನ್ಯ. ಏಕೆಂದರೆ ಒಂದೆಂದೂ ನನ್ನ ಮನೆಯಲ್ಲಿ ಕಳ್ಳತನವಾಗಿರಲಿಲ್ಲ. ಎರಡನೆಯದಾಗಿ, ಆತ ನನ್ನ ಹಣವನ್ನು ದೋಚಿದರೂ ನನ್ನ ಜೀವಕ್ಕೆ ಅಪಾಯ ಉಂಟುಮಾಡಲಿಲ್ಲ. ಮೂರನೆಯದಾಗಿ, ನನ್ನ ಬಳಿಯಿದ್ದ ಎಲ್ಲ ಹಣವನ್ನೂ ಕೊಂಡೊಯ್ದರೂ ಅದೇನೂ ಬಹಳ ದೊಡ್ಡ ಮೊತ್ತವಲ್ಲ. ಕಡೆಯದಾಗಿ, ನನ್ನ ಹಣದ ಕಳ್ಳತನವಾಯಿತೇ ಹೊರತು ನಾನೇ ಕಳ್ಳನಲ್ಲವಲ್ಲ!"